ರಾಜ್ಯ ಸರ್ಕಾರವು ಮುಂದಿನ ಏಳು ವರ್ಷಗಳ ಅವಧಿಯಲ್ಲಿ ಕರ್ನಾಟಕ ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿರಿಸಿಕೊಂಡು ವಿಷನ್ 2025 ಡಾಕ್ಯುಮೆಂಟ್ ಎಂಬ ಹೆಸರಿನಲ್ಲಿ ನೀಲ ನಕ್ಷೆ ಮತ್ತು ಅನುಷ್ಠಾನ ಕಾರ್ಯಗಳ ಬಗ್ಗೆ ಯೋಜನೆಯನ್ನು ಸಿದ್ಧಪಡಿಸಲು ಕಾರ್ಯಾರಂಭ ಮಾಡಿದೆ.

ವಿಷನ್ 2025 ಡಾಕ್ಯುಮೆಂಟ್‌ನ್ನು ಸಿದ್ದಪಡಿಸುವ ಸಲುವಾಗಿ ಸಮತಲ ಮತ್ತು ಲಂಬ ರೂಪದಲ್ಲಿ ವಿಚಾರಸಂಕಿರಣಗಳನ್ನು/ಸಂವಾದಗಳನ್ನು ಏರ್ಪಡಿಸುವ ಸಂಬಂಧ ಲಂಬ ರೂಪದ ಒಂದು ಭಾಗವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳನ್ನೊಳಗೊಂಡಂತೆ ರಾಜ್ಯದ ಎಲ್ಲಾ ಮೂಲೆಗಳಿಂದಲೂ ಸಾಮಾನ್ಯ ಜನರ ಅಭಿಪ್ರಾಯ ಮತ್ತು ಪ್ರತಿಕ್ರಿಯೆಗಳನ್ನು ಸೇರಿಸಿಕೊಳ್ಳಲು ಉದ್ದೇಶಿಸಿ, ಈ ನಿಟ್ಟಿನಲ್ಲಿ ಜಿಲ್ಲಾ ಮಟ್ಟದಲ್ಲಿ ಸಭೆಗಳನ್ನು ನಡೆಸುವ ಕುರಿತಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ವಿಷನ್ ಡಾಕ್ಯುಮೆಂಟ್ ಪ್ರಾಜೆಕ್ಟ್, ಇವರ ಅಧ್ಯಕ್ಷತೆಯಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ದಿನಾಂಕ: 07/10/2017ರಂದು ವಿಚಾರಸಂಕಿರಣ/ಸಂವಾದ ಕಾರ್ಯಾಗಾರ ನಡೆಯಲಿದೆ.

ಈ ಕಾರ್ಯಾಗಾರದಲ್ಲಿ ಈ ಕೆಳಕಂಡ 13 ವಲಯಗಳಿಗೆ ಸಂಬಂಧಪಟ್ಟಂತೆ ಮುಂದಿನ 7 ವರ್ಷಗಳಲ್ಲಿ ಆಗಬೇಕಾದ ಸಮಗ್ರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿರಿಸಿಕೊಂಡು ಚರ್ಚೆ ನಡೆಯಲಿದೆ.

| | |
|---|---|
| 1 | ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಕ್ಷೇತ್ರಗಳು |
| 2 | ಮೂಲ ಸೌಕರ್ಯಗಳು (ರಸ್ತೆ, ವಿದ್ಯುಚ್ಛಕ್ತಿ, ಕುಡಿಯುವ ನೀರಿನ ಸೌಲಭ್ಯ ಮತ್ತು ನೈರ್ಮಲ್ಯೀಕರಣ) |
| 3 | ಉದ್ಯೋಗ ಮತ್ತು ಕೌಶಲ್ಯ |
| 4 | ಕೈಗಾರಿಕಾಭಿವೃದ್ಧಿ |
| 5 | ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ |
| 6 | ಆರೋಗ್ಯ ಮತ್ತು ಪೋಷಣೆ |
| 7 | ಶಿಕ್ಷಣ |
| 8 | ಗ್ರಾಮೀಣಾಭಿವೃದ್ಧಿ |
| 9 | ನಗರಾಭಿವೃದ್ಧಿ |
| 10 | ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ |
| 11 | ಸೇವೆಗಳು |
| 12 | ಆಡಳಿತ |
| 13 | ಕಾನೂನು ಮತ್ತು ಸುವ್ಯವಸ್ಥೆ/ ನ್ಯಾಯಾಧಿಕಾರ |

ಆದ್ದರಿಂದ ಮೇಲ್ಕಂಡ ವಲಯಗಳಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ತಮ್ಮ ಅಮೂಲ್ಯ ವಿಚಾರಗಳನ್ನು/ಸಲಹೆಗಳನ್ನು ಈ vision2025dvg@gmail.com ಈ-ಮೇಲ್ ವಿಳಾಸಕ್ಕೆ ಕಳುಹಿಸಿಕೊಡಲು ಕೋರಿದೆ.